**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1523/2024**

| | | | |
|---|---|---|---|
| **ಹೆಸರು** | **:** | **ಸಿದ್ದೇಶ್ವರ** | **ಚಾಸಾ. 1** |
| **ತಂದೆಯ ಹೆಸರು** | **:** | **ಕೃಷ್ಣಾಜಿ** | **ಪ್ರಾ.ಸಾ. 1** |
| **ವಯಸ್ಸು** | **:** | **34 ವರ್ಷ** | **ದಿನಾಂಕಃ 30-10-2025** |
| **ಉದ್ಯೋಗ** | **:** | **PSI** | |
| **ವಾಸಸ್ಥಳ** | **:** | **ಬಸವಕಲ್ಯಾಣ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಫೇಬ್ರುವರಿ 2024 ರಿಂದ ಜೂನ್ 2024 ರವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 05-04-2024 ರಂದು ಸಾಯಂಕಾಲ 4 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಿಂಚೋಳಿ ಪಟ್ಟಣದ ಅಂಬೇಡ್ಕರ ಸರ್ಕಲ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಯಾರೋ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಭಾತ್ಮಿ ಬಂದಿದ್ದು, ಆದ್ದರಿಂದ ನನ್ನ ಮೇಲಾಧಿಕಾರಿಗಳ ಸೂಕ್ತ ಮಾರ್ಗದರ್ಶನ ಪಡೆದುಕೊಂಡು ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-4 ಮತ್ತು 5 ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ ಸಾಯಂಕಾಲ 4-30 ಗಂಟೆ ಸುಮಾರಿಗೆ ಠಾಣಯಿಂದ ಹೊರಟು ಸಾಯಂಕಾಲ 4-35 ಗಂಟೆ ಸುಮಾರಿಗೆ ಭಾತ್ಮಿ ಸ್ಥಳದಲ್ಲಿ ಮರೆಯಲ್ಲಿ ನಿಂತು ನೋಡಿದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಅಕ್ರಮವಾಗಿ ಮದ್ಯಪಾನ ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು ಅವನ ಮೇಲೆ ಸಿಬ್ಬಂದಿಯೊಂದಿಗೆ ಪಂಚರ ಸಮಕ್ಷಮ ದಾಳಿ ಮಾಡಿ ಅವನ ಹೆಸರು ವಿಚಾರಿಸಿದಾಗ ತನ್ನ ಹೆಸರು ಪ್ರಭು ತಂದೆ ಬಕ್ಕಪ್ಪ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ.

ಅವನ ಮುಂದೆ ಇಟ್ಟುಕೊಂಡ ಮದ್ಯವನ್ನು ಪರಿಶೀಲಿಸಿದಾಗ ಅಲ್ಲಿ 90 ML ಅಳತೆಯ 275 Original Choice ವಿಸ್ಕಿ ಪೌಚಗಳು ಸಿಕ್ಕಿರುತ್ತವೆ. ನಂತರ ಸಿಕ್ಕ ವಸ್ತುಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಅವುಗಳನ್ನು ಸೀಲ ಮಾಡಿ ಸಾಯಂಕಾಲ 4.40 ರಿಂದ 5.40 ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿಗಳನ್ನು ಪಡೆದಿದ್ದೇನೆ.

ನಾವು ಅಲ್ಲಿದ್ದ ವ್ಯಕ್ತಿಗೆ ಕೇಳಿದಾಗ ತನ್ನ ಹತ್ತಿರ ಮದ್ಯಪಾನ ಮಾರಾಟ ಮಾಡುವ ಪರವಾನಿಗೆ ಇಲ್ಲ

ಎಂದು ತಿಳಿಸಿರುತ್ತಾನೆ. ಮರಳಿ ಠಾಣೆಗೆ ಸಾಯಂಕಾಲ 6-10 ಕ್ಕೆ ಬಂದು ಒಂದು ದೂರು, ಜಪ್ತಿ ಪಂಚನಾಮೆ ಹಾಗೂ ಜಪ್ತಿ ಮಾಡಿದ ಮುದ್ದೆಮಾಲುಗಳನ್ನು ಮುಂದಿನ ತನಿಖೆಗಾಗಿ ಚಾಸಾ-7 ರವರಿಗೆ ಸಲ್ಲಿಸಿರುತ್ತೇನೆ.

ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ. ಸದರಿ ದೂರನ್ನು ನಿಪಿ-1 ಎಂದು, ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಜಪ್ತಿ ಪಂಚನಾಮೆಯನ್ನು ನಾನೇ ಜರುಗಿಸಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ. ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ 90 ML ಅಳತೆಯ 275 Original Choice ವಿಸ್ಕಿ ಪೌಚಗಳು ನಾನು ಆರೋಪಿಯಿಂದ ಜಪ್ತಿ ಮಾಡಿದ್ದು ಅವುಗಳನ್ನು ಒಟ್ಟುಗೂಡಿಸಿ ಮು.ಮಾ.1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ASH ವಕೀಲರಿಂದಃ</u>**

ಪಂಚರನ್ನು ಚಾಸಾ-4ರವರು ಕರೆದುಕೊಂಡು ಬಂದಿರುತ್ತಾರೆ. ಈ ರೀತಿ ನನ್ನ ದೂರಿನಲ್ಲಿ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ಅಂಬೇಡ್ಕರ ಸರ್ಕಲ ಹತ್ತಿರ 3 ರಸ್ತೆಗಳು ಇವೆ ಎಂದರೆ ಸರಿ. ನಮ್ಮ ಪೋಲಿಸ ಠಾಣೆಯ ಹಿಂದೆ ಇರುವ ಮುಖ್ಯ ರಸ್ತೆ ಮೇಲೆ ನಿಂತರೇ ಅಂಬೇಡ್ಕರ ಸರ್ಕಲ ಕಾಣುತ್ತದೆ ಎಂದರೆ ಸರಿಯಲ್ಲ. ಬಸ್ ನಿಲ್ದಾಣದ ಹತ್ತಿರ ನಿಂತರೇ ನಮ್ಮ ಪೋಲಿಸ ಠಾಣೆಯ ಮುಖ್ಯ ರಸ್ತೆವರೆಗೆ ಕಾಣುತ್ತದೆ ಎಂದರೆ ಸರಿಯಲ್ಲ. ಆ ದಿನ ನಾವು ಪೋಲಿಸ ವರದಿಯ ಮೇಲೆ ಸ್ಥಳಕ್ಕೆ ಹೋಗಿರುತ್ತೇವೆ. ಅಂಬೇಡ್ಕರ ಸರ್ಕಲ ಹತ್ತಿರ ಆ ದಿನ ಅಂದಾಜು 50 ಜನರು ಇದ್ದರು.

ಆರೋಪಿಯ ಮನೆ ಎಲ್ಲಿದೆ ಎಂದು ನಾನು ಕೇಳಿಲ್ಲ. ಆರೋಪಿಯ ಮನೆ ಅಂಬೇಡ್ಕರ ಸರ್ಕಲ ಹತ್ತಿರ ರಸ್ತೆಯ ಪಕ್ಕದಲ್ಲಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯಿಂದ ಹಣ ದೊರೆತ್ತಿರುತ್ತದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಆಗ ಅವನ ಹತ್ತಿರ ಸ್ವಂತ ರೂ. 200/- ಇತ್ತು ಎಂದು ನುಡಿಯುತ್ತಾರೆ. ಈ ರೀತಿ ನನ್ನ ದೂರಿನಲ್ಲಿ ಉಲ್ಲೇಖವಿಲ್ಲ. ಆರೋಪಿ ಮದ್ಯಪಾನವನ್ನು ಎಲ್ಲಿಂದ ತಂದಿರುವ ಬಗ್ಗೆ ಕೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಆರೋಪಿಗೆ ಕೇಳಿದಾಗ ಆತ ಎಲ್ಲಾ ವೈನಶಾಪಗಳಿಂದ ಸ್ವಲ್ಪ ಸ್ವಲ್ಪ ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಚಿಂಚೋಳಿ ಪಟ್ಟಣದಲ್ಲಿ 6 ರಿಂದ 7 ವೈನಶಾಪಗಳು ಇವೆ ಎಂದರೆ ಸರಿ. ಪ್ರತಿಯೊಂದು ವೈನಶಾಪನ ಬ್ಯಾಚ್ ಸಂಖ್ಯೆ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ಮು.ಮಾ-1ರ ಬ್ಯಾಚ್ ಸಂಖ್ಯೆಯನ್ನು ನಾನು ನೋಡಿಲ್ಲ. ಅಂಬೇಡ್ಕರ ಸರ್ಕಲನ ಹಿಂದಿನ ಭಾಗದಲ್ಲಿ ಘಟನಾ ಸ್ಥಳ ಇರುತ್ತದೆ. ಈ ರೀತಿ ಅಂಬೇಡ್ಕರ ಸರ್ಕಲನ ಹಿಂದೆ ಘಟನಾ ಸ್ಥಳವಿದೆ ಎಂದು ದೂರಿನಲ್ಲಿ ಉಲ್ಲೇಖವಿಲ್ಲ ಎಂದರೆ ಸಾಕ್ಷಿ ಪಂಚನಾಮೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಅಂಬೇಡ್ಕರ ಸರ್ಕಲ ಹಿಂದೆ ಮನೆಗಳು ಇವೆ ಎಂದರೆ ಸಾಕ್ಷಿ ಖುಲ್ಲಾ ಜಾಗವಿದೆ ಎಂದು ನುಡಿಯುತ್ತಾರೆ. ಅಲ್ಲಿ ಯಾವುದೇ ಖುಲ್ಲಾ ಜಾಗವಿಲ್ಲ

ಎಂದರೆ ಸರಿಯಲ್ಲ.

ಚಾಸಾ-3ರವರ ಮನೆ ನಮ್ಮ ಠಾಣೆಯ ಹಿಂದೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-3ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಅಂಬೇಡ್ಕರ ಸರ್ಕಲ ಪಕ್ಕದಲ್ಲಿ ಮನೆಗಳು ಇವೆ ಎಂದರೆ ಸರಿ. ಸ್ಥಳದಲ್ಲಿ ನಾನು ಯಾವುದೇ ವ್ಯಕ್ತಿಗಳ ಹೇಳಿಕೆಯನ್ನು ಪಡೆದಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಆರೋಪಿಯ ಮೇಲೆ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಮುದ್ದೆ ಮಾಲನ್ನು ಈ ಪ್ರಕರಣದಲ್ಲಿ ಸೇರಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**